3. ಪ್ರಶ್ನೋತ್ತರ

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಶ್ರೀ ಎಸ್ ಟಿ. ಸೋಮಶೇಖರ (ಯಶವಂತಪುರ) ಮಾನ್ಯ ಅಧ್ಯಕ್ಷರೆ, ವಸತಿ ಇಲಾಖೆಯ ಶಿರ್ಕೆ ಅಪಾರ್ಟಮೆಂಟನಲ್ಲಿ ಸುಮಾರು 2500 ಮನೆಗಳಿವೆ. ಸುಮಾರು ವರ್ಷಗಳಿಂದ ನೀರಿನ arrears ಕಟ್ಟಬೇಕೆಂದು ಹೇಳಿ ಹೌಸಿಂಗ ಬೊರ್ಡನವರು ಹಾಗೂ Water Board ನವರು prestige ಆಗಿ ತೆಗೆದುಕೊಳ್ಳುತ್ತಿದ್ದಾರೆ.

ಅಧ್ಯಕ್ಷರು: ದಯವಿಟ್ಟು ತಾವು ಪ್ರಶ್ನೆ ಕೇಳಿ.

ಕೆ.ಹೆಚ್.ಬಿ ವಸತಿ ಸಮುಚ್ಚಯಗಳು.

554; ಶ್ರೀ ಸೋಮಶೇಖರ್ ಎಸ್ ಟಿ

ಅ) ಕೆಂಗೇರಿ ಉಪನಗರದಲ್ಲಿ ಕರ್ನಾಟಕ ಗೃಹ ಮಂಡಳಿ ವತಿಯಿಂದ ನಿರ್ಮಿಸಿರುವ ಬಹುಮಹಡಿ ಕಟ್ಟಡ ವಸತಿ ಸಮುಚ್ಚಯದ ಮನೆಗಳಿಗೆ ನೀರು ಪೂರೈಕೆ ಮಾಡಲು B W S S Bಗೆ ಇಲ್ಲಿಯವರೆಗೆ ಎಷ್ಟು ಹಣ ಪಾವತಿ ಮಾಡಲಾಗಿದೆ?

ಆ) ಗೃಹ ಮಂಡಳಿಯವರು ಈ ಮನೆಗಳನ್ನು ಹಂಚಿಕೆ ಮಾಡಿ ಸ್ವಾಧೀನಕ್ಕೆ ನೀಡಿದ ದಿನಾಂಕದ ಮೊದಲಿನ ನೀರಿನ ಬಿಲ್ಲನ್ನು ಗೃಹ ಮಂಡಳಿ ವತಿಯಿಂದಲೇ ಪಾವತಿ ಮಾಡಲಾಗಿದೇಯೇ (ಪೂರ್ಣ ವಿವರ ನೀಡುವುದು)?

ಇ) ಪಾವತಿಸಿದ್ದಲ್ಲಿ ಕಾರಣ ನೀಡುವುದು, ಬಾಕಿ ಇರುವ ಮೊತ್ತವೆಷ್ಟು (ವಿವರ ನೀಡುವುದು)?

ಡಾ: ಎಂ.ಹೆಚ್. ಅಂಬರೀಷ್ (ವಸತಿ ಸಚಿವರು)

ಅ) ಮತ್ತು ಆ) ಕೆಂಗೇರಿ ಉಪನಗರದಲ್ಲಿ ಕರ್ನಾಟಕ ಗೃಹಮಂಡಳಿಯ ವತಿಯಿಂದ ನಿರ್ಮಿಸಲಾಗಿರುವ ಬಹುಮಹಡಿ ಕಟ್ಟಡ ವಸತಿ

ಸಮುಚ್ಚಯದ ಮನೆಗಳನ್ನು ಹಂಚಿಕೆ ಮಾಡಿ ಸ್ವಾಧೀನಕ್ಕೆ ನೀಡಿದ ದಿನಾಂಕಕ್ಕೆ ಮೊದಲು ಮತ್ತು ಇಲ್ಲಿಯವರೆಗೆ B W S S B ನೀರು ಮೂರೈಕೆ ಬಾಬ್ತು ಕರ್ನಾಟಕ ಗೃಹಮಂಡಳಿ ಪಾವತಿ ಮಾಡಿರುವ ಮೊತ್ತದ ವಿವರ ಕೆಳಕಂಡಂತಿದೆ·

1. ದಿನಾಂಕ 07/02/2003 ರಂದು ₹ 4.00,000/–
2. ದಿನಾಂಕ . 20/11/2003 ರಂದು ₹ 11,63,703/–
3 ದಿನಾಂಕ 12/03/2004 ರಂದು ₹ 10,00,000/–
4 ದಿನಾಂಕ 27/02/2009 ರಂದು ₹ 1,28,589/–
5 ದಿನಾಂಕ · 27/02/2009 ರಂದು ₹ 16,64,409/–
6. ದಿನಾಂಕ . 28/03/2011 ರಂದು ₹ 1,00,99,795/–

ಒಟ್ಟ ಮೊತ್ತ ₹ 1,44,56,496/–

ಇ) ಅಕ್ಟೋಬರ್ 2013 ರ ಅಂತ್ಯಕ್ಕೆ ಬಡ್ಡಿ ಸೇರಿಸಿ ₹ 3,45,84,958/– ಬಾಕಿ ಇರುತ್ತದೆ. ಬೆಂಗಳೂರು ಜಲ ಮಂಡಳಿಯವರು ಮನೆಗಳಿಂದ ಸಂದಾಯ ಮಾಡಿದ ಮೀಟರ್‌ವಾರು ಪಾವತಿಯನ್ನು ಪರಿಗಣಿಸದೇ ಬಿಲ್ಲನ್ನು ನೀಡಿರುತ್ತಾರೆ ಆದುದರಿಂದ ಮನೆಗಳಿಂದ ಸಂದಾಯ ಮಾಡಿದ ಮೀಟರ್‌ವಾರು ಪಾವತಿಯನ್ನು ಪರಿಗಣಿಸಿ ಪರಿಷ್ಕೃತ ಬಿಲ್ಲನ್ನು ಹಾಗೂ ಬಡ್ಡಿ ಲೆಕ್ಕಚಾರದ ಬಗ್ಗೆ ವಿವರನ್ನು ನೀಡುವಂತೆ B W S S Bಯವರನ್ನು ಕೋರಲಾಗಿದೆ.

ಡಾ: ಎಂ.ಹೆಚ್ ಅಂಬರೀಶ್ (ವಸತಿ ಸಚಿವರು) ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ, ಆದರೆ ಅದಕ್ಕಿಂತ ಮುಂಚಿತವಾಗಿ

ಅಧ್ಯಕ್ಷರು: ಉತ್ತರ ಒದಗಿಸಿದ್ದೇನೆ ಎಂದು ಹೇಳಿ.

ಡಾ: ಎಂ ಹೆಚ್ ಅಂಬರೀಶ್: ಆ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆಂದು ಅವರೇ ಹೇಳಿದ್ದಾರೆ ತಪ್ಪು ಕಂಡುಹಿಡಿಯಬೇಕು ಅವರು

ಹೇಳುತ್ತಾರೆ ನಾನು ಅದಕ್ಕೆ ಉತ್ತರ ಕೊಡುತ್ತೇನೆ. ಅದಕ್ಕೆ ಮುಂಚೆ ನಿಮ್ಮಲ್ಲಿ ಒಂದು ಮನವಿ ಮಾಡಿತ್ತೇನೆ, ಸುವರ್ಣ ಸೌಧದಲ್ಲಿ ಮೊದಲನೇ ಬಾರಿಗೆ ನಾನು ಶಾಸಕನಾಗಿ ಆಯ್ಕೆಯಾಗಿ ಬಂದಿದ್ದೇನೆ. ನನಗೂ ಜೀವನದಲ್ಲಿ ಮೊದಲನೇ ಸಲ ಶಾಸಕನಾಗಿ ಮಂತ್ರಿಯಾಗಿ ಪ್ರಶ್ನೆಗೆ ಉತ್ತರ ಕೊಡುವಂತಹ ಸುವರ್ಣ ಅವಕಾಶ ದೊರಕಿದೆ. ಇವರು ಕರ್ನಾಟಕದಲ್ಲಿ ಬಹಳ ವರ್ಷಗಳಿಂದ ರಾಜಕಾರಣ ಮಾಡಿದವರು ಇವರು ಇಲ್ಲಿ ಬಂದು ಬಾವಿಯಲ್ಲಿ ಕೂತಿದ್ದಾರೆ. ಇದರಿಂದ ನನಗೆ ಅವಮಾನ ಎಂದು ತಿಳಿದು ನಾನು ಪರ್ಸನಲ್ಲಾಗಿ ಮನವಿ ಮಾಡಿ ಮಾನ್ಯ ಸದಸ್ಯರು ತಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಳ್ಳಬೇಕೆಂದು ನನ್ನ ಆಸೆ ಇದೆ ಅದಕ್ಕೆ ತಾವು ಅನುಮತಿ ಕೊಡಿ

(ಈ ಹಂತದಲ್ಲಿ ಮಾನ್ಯ ವಸತಿ ಸಚಿವರಾದ ಡಾ ಎಂ ಹೆಚ್ ಅಂಬರೀಶ್‌ರವರು ಬಾವಿಗೆ ಬಂದು ಮಾನ್ಯ ಸದಸ್ಯರಾದ ಶ್ರೀ ಯಡಿಯೂರಪ್ಪನವರು ಹಾಗೂ ಕೆ.ಜೆ.ಪಿ ಶಾಸಕಾಂಗ ಪಕ್ಷದ ಶಾಸರುಗಳಿಗೆ ಮನವಿ ಮಾಡಿ ಅವರನ್ನು ಕರೆದುಕೊಂಡು ಹೋಗಿ ಅವರವರ ಸ್ಥಾನದಲ್ಲಿ ಕೂರಿಸಿದರು)

(ಗೊಂದಲ)

ಶ್ರೀ ವೈ.ಎಸ್.ವಿ ದತ್ತಾ: ಸದನದ ಕಲಾಪ ನಾಟಕೀಯ ಆಗುವುದು ಬೇಡ.

ಅಧ್ಯಕ್ಷರು: ಮಾನ್ಯ ಯಡಿಯೂರಪ್ಪನವರೇ ಸಾಕು. ದಯವಿಟ್ಟು ಕುಳಿತುಕೊಳ್ಳಿ. (ಈ ಹಂತದಲ್ಲಿ ಮಾನ್ಯ ಕೆಜೆಪಿ ಪಕ್ಷದ ಶಾಸಕರು ಹಾಗೂ ಮಾನ್ಯ ಯಡಿಯೂರಪ್ಪನವರು ಪುನಃ ಬಾವಿಗೆ ಬಂದು ಧರಣಿ ಮುಂದುವರಿಸಿದರು)

(ಗೊಂದಲ)

ಶ್ರೀ ಬಿ.ಜಡ್. ಜಮೀರ್ ಅಹಮದ್ ಖಾನ್: ಮಾನ್ಯ ಅಧ್ಯಕ್ಷರೆ, ಎಲ್ಲಾ ಧರ್ಮಗಳಲ್ಲೂ...

ಶ್ರೀ ಆರ್ ವಿ. ದೇಶಪಾಂಡೆ: ಮಾನ್ಯ ಅಧ್ಯಕ್ಷರೆ, ನಾವು ಮನವಿ ಮಾಡಿಕೊಂಡಿದ್ದೇವೆ, ಸರ್ಕಾರ ಮನವಿ ಮಾಡಿಕೊಂಡಿದೆ, ಮಾನ್ಯ ವಿರೋಧ ಪಕ್ಷದ ನಾಯಕರು ಮನವಿ ಮಾಡಿದ್ದಾರೆ, ಮಾನ್ಯ ಜಗದೀಶ ಶೆಟ್ಟರ್‌ರವರು ಮನವಿ ಮಾಡಿದ್ದರೆ, ಅವರ ಮನವಿಗಳಿಗೆ ಶ್ರೀ ಯಡಿಯೂರಪ್ಪನವರು ಓಗೊಡಬೇಕೆಂದು ಕೇಳಿಕೊಳ್ಳುತ್ತೇನೆ

(ಗೊಂದಲ)

ಶ್ರೀ ಆರ್ ವಿ ದೇಶಪಾಂಡೆ ಏನು ಶಾದಿ ಭಾಗ್ಯ, ಶಾದಿ ಭಾಗ್ಯ ಎಂದು ಹೇಳುತ್ತೀರಿ, ಶಾದಿ ಭಾಗ್ಯ ಎಂದು ಯಾವ ಸ್ಕೀಮೂ ಇಲ್ಲ ಭಾವಿಯಲ್ಲಿ ಹೋಗಿ ಕುಳಿತರೆ ನಾವೇನೂ ಮಾಡುವುದಕ್ಕಾಗುವುದಿಲ್ಲ ನಾವು ವಿನಂತಿ ಮಾಡಿದ್ದೇವೆ

(ಗೊಂದಲ)

ಅಧ್ಯಕ್ಷರು: ದಯವಿಟ್ಟು ಕುಳಿತುಕೊಳ್ಳಿ. ಏನು ಬೇಕೆಂದು ಒಬ್ಬೊಬ್ಬರು ಹೇಳಿ

ಶ್ರೀ ಆರ್ ಅಶೋಕ್: ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ಬಂದು ಅವರ ಸ್ಥಾನದಲ್ಲಿ ಕುಳಿತುಕೊಳ್ಳಬೇಕೆಂದು ಮಾನ್ಯ ಗೌರವಾನ್ವಿತ ಸಚಿವರಾದ ಅಂಬರೀಶ್‌ರವರು ಅವರ ಸ್ಥಾನ ಬಿಟ್ಟು ಬಂದು ಕೇಳಿಕೊಂಡಿದ್ದಾರೆ. ವಿಷಯ ಇರುವುದು ತಾವು ಚರ್ಚೆಗೆ ಅವಕಾಶಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು · ಪ್ರಶ್ನೋತ್ತರ ಆದ ಮೇಲೆ ತೆಗೆದುಕೊಳ್ಳೋಣ.ದಯವಿಟ್ಟು ಕುಳಿತುಕೊಳ್ಳಿ ಈ ತರಹ ಆಗುವುದಿಲ್ಲ ಪ್ರಶ್ನೆ ಕೇಳಿ ಆಗಿದೆ

(ಗೊಂದಲ)

ಅಧ್ಯಕ್ಷರು: Please resume, please resume

ಶ್ರೀ ಬಿ ಜಡ್ ಜಮೀರ್ ಅಹಮದ ಖಾನ್. ಈ ಶಾದಿ ಭಾಗ್ಯ ಯೋಜನೆ ಏನು ಕೊಟ್ಟಿದ್ದಾರೆ, ಇವತ್ತು ಮೈನಾರಿಟಿ ಎಂದು ಶಾದಿ ಭಾಗ್ಯ ಯೋಜನೆಯಲ್ಲಿ ಹಣ ಕೊಡುತ್ತಿಲ್ಲ,

ಅಧ್ಯಕ್ಷರು: ಇವರು ಏನು ಹೇಳುತ್ತಿದ್ದಾರೆ, ಯಾವೂದು ದಾಖಲೆ ತೆಗೆದುಕೊಳ್ಳಬೇಡಿ. Don't Record it

(ಗೊಂದಲ)

(ಭಾರತಿಯ ಜನತಾ ಪಕ್ಷದ ಶಾಸಕರುಗಳು ಸದನದ ಬಾವಿಗೆ ಆಗಮಿಸಿದರು)

(ಗೊಂದಲ)

ಅಧ್ಯಕ್ಷರು: ಅಶೋಕ್‌ರವರೆ, ದಯವಿಟ್ಟು ಕುಳಿತುಕೊಳ್ಳಿ, ನಿಂತಿರುವ ಎಲ್ಲ ಸದಸ್ಯರುಗಳು ಕುಳಿತುಕೊಳ್ಳಿ.ದಯವಿಟ್ಟು ಎಲ್ಲ ಸದಸ್ಯರುಗಳು ಅರ್ಥ ಮಾಡಿಕೊಳ್ಳಿ.ಸದನದ ಕಾರ್ಯಕಲಾವಗಳು ತುಂಬಾ ಗಂಭೀರವಾಗಿ ನಡೆಯಬೇಕು, ಹೇಳಬೇಕು, ಹೇಳುವ ಧ್ವನಿಯಲ್ಲಿ ಹೇಳುವ ವಿಧಿಯಲ್ಲಿ ಹೇಳಬೇಕೆ ವಿನ. ನಾನೇ ಕೊಡುತ್ತೇನೆ 2 ಕೋಟಿ, ನಾನೇ ಕೊಡುತ್ತೇನೆ 2 ಕೋಟಿ ಎಂದು ಇದನ್ನೇಲ್ಲಾ ಹೇಳಿ ಕೂಡದು ನಿಮ್ಮ ಅಂತಸ್ತು ನಿಮ್ಮ ಐಶ್ವರ್ಯವೆಲ್ಲವನ್ನು ಮನೆಯಲ್ಲಿ ಇಟ್ಟುಕೊಳ್ಳಿ, ಇಲ್ಲಿ ಹೇಳಿ ಅದರ ಪ್ರದರ್ಶನ ಮಾಡುವುದಕ್ಕೆ ಬರಬೇಡಿ.

ಶ್ರೀ ಆರ್ ಅಶೋಕ್: ಮಾನ್ಯ ಅಧ್ಯಕ್ಷರೆ, ನಾನು ಹೇಳುವುದೆನೆಂದರೆ . .

ಅಧ್ಯಕ್ಷರು: ತಾವು ದಯವಿಟ್ಟು ಕುಳಿತುಕೊಳ್ಳಿ ನೀವು ಹೇಳುವ ವಿಷಯದ ಬಗ್ಗೆ ಈಗ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಈಗಾಗಲೇ ಪ್ರಶ್ನೋತ್ತರ ಕಲಾಪವನ್ನು ತೆಗೆದುಕೊಂಡಿದ್ದೇನೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು: ಜಗದೀಶ್ ಶೆಟ್ಟರ್‌ರವರೆ, ಈಗಾಗಲೇ ನಾನು ಪ್ರಶ್ನೋತ್ತರ ಕಲಾಪವನ್ನು ತೆಗೆದುಕೊಂಡಿದ್ದೇನೆ. ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಉತ್ತರವನ್ನು ಕೂಡ ಕೊಡುವುದಕ್ಕೆ ಮಾನ್ಯ ಸಚಿವರು ಎದ್ದು ನಿಂತಿದ್ದಾರೆ ಈ ಹಂತದಲ್ಲಿ ನಾನು ಪ್ರಶ್ನೋತ್ತರ ಕಲಾಪವನ್ನು ಮೊಟಕುಗೊಳಿಸುವುದಕ್ಕೆ ಆಗುವುದಿಲ್ಲ

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೆ ಬಿ.ಜೆ.ಪಿ ಸ್ನೇಹಿತರಾದ ಮಾನ್ಯ ಜಗದೀಶೆಟ್ಟರ್‌ರವರು ಏನು ನಿಲುವಳಿ ಸೂಚನೆಯನ್ನು ಕಳುಹಿಸಿದ್ದಾರೆ ಈ ಶಾದಿ ಭಾಗ್ಯ ಯೋಜನೆ ಬಗ್ಗೆ ಚರ್ಚೆಯಾಗಬೇಕೆಂದು, ಇದು ಸರ್ಕಾರದ ಆಯವ್ಯಯದಲ್ಲಿ ಘೋಷಣೆ ಮಾಡಿರುವುದಲ್ಲಿ ಶಾದಿ ಭಾಗ್ಯ ಎನ್ನುವ ಯೋಜನೆಯ ಹೆಸರಿಲ್ಲ. ಅಲ್ಲಿರತಕ್ಕಂಥದ್ದು ಬಿದಾಯಿ ಎಂದು. ಆದರೂ ಕೂಡ ಮಾನ್ಯ ಅಧ್ಯಕ್ಷರಾದ ತಾವು ಅವರಿಗೆ ಚರ್ಚೆಗೆ ಅವಕಾಶ ಕೊಡುತ್ತೇವೆಂದು ಹೇಳಿದ್ದೀರಿ. ಈಗ ಪ್ರಶ್ನೋತ್ತರ ಕಲಾಪವಾದ ಮೇಲೆ ನೀವು ಆ ಶಾದಿ ಭಾಗ್ಯ ಎನ್ನತಕ್ಕಂಥ ಹೆಸರಲ್ಲಿ ಕಳುಹಿಸಿರುವಂಥದ್ದಕ್ಕೆ ಚರ್ಚೆಗೆ ಇಲ್ಲಿ ಅವಕಾಶವೇ ಇಲ್ಲ. ಬಿದಾಯಿ ಎಂದು ಕಳುಹಿಸಬೇಕಾಗಿತ್ತು ಆದರೂ ಸಭಾಧ್ಯಕ್ಷರು ನಿಮಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇವೆಂದು ಹೇಳಿದ್ದಾರೆ. ಪ್ರಶ್ನೊತ್ತರ ಕಲಾಪವಾದ ಮೇಲೆ ಈ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಜಗದೀಶ್ ಶೆಟ್ಟರ್.– ತಾಂತ್ರಿಕವಾದ ಕಾರಣಗಳನ್ನು ಹೇಳಿಕೊಂಡು ಚರ್ಚೆಗೆ ಅವಕಾಶ ಕೊಡುವುದಕ್ಕೆ ಬರುವುದಿಲ್ಲವೆಂದು ಹೇಳುವುದು ಸರಿಯಾಗುವುದಿಲ್ಲ. ಚರ್ಚೆಗೆ ಅವಕಾಶ ಕೊಡುವ ಬಗ್ಗೆ ಸಭಾಧ್ಯಕ್ಷರಿಗೆ ಪರಮಾಧಿಕಾರವಿದೆ.

(ಗೊಂದಲ)

(ಈ ಹಂತದಲ್ಲಿ ಈಗಾಗಲೇ ಕೇಳಿರುವ ಪ್ರಶ್ನೆಗೆ ವಸತಿ ಸಚಿವರು ಉತ್ತರ ಕೊಡಬೇಕೆಂದು ಆಡಳಿತ ಪಕ್ಷದ ಹಲವಾರು ಸದಸ್ಯರು ಒಮ್ಮೆಗೆ ಆಗ್ರಹಿಸಿದರು)

ಅಧ್ಯಕ್ಷರು: ಆಯಿತು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರ ಕಲಾಪ ಮುಗಿದ ಮೇಲೆ ಶಾದಿ ಭಾಗ್ಯದ ಬಗ್ಗೆ ಅವಕಾಶ ಕೊಡುತ್ತೇವೆಂದು ಈಗಾಗಲೇ ಹೇಳಿದ್ದೀರಿ. ಯೋಜನೆಯಲ್ಲಿ ನ್ಯೂನತೆಗಳಿದ್ದರೆ, ಲೋಪದೋಷಗಳಿದ್ದರೆ ಅದನ್ನು ಹೇಳುವುದಕ್ಕೆ ತಾವು ಅವಕಾಶ ಕೊಡುತ್ತೇವೆಂದು ಹೇಳಿರುವುದರಿಂದ ದಯವಿಟ್ಟು ಧರಣಿಯಲ್ಲಿರುವ ಮಾನ್ಯ ಶಾಸಕ ಸ್ನೇಹಿತರುಗಳು ಸದನದ ಕಲಾಪವನ್ನು ಸುಗಮವಾಗಿ ನಡೆಯಲು ಸಹಕಾರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಓ.ಕೆ., ತಾವು ಕುಳಿತುಕೊಳ್ಳಿ ಮಾನ್ಯ ಸಚಿವರೆ, ತಾವು ಉತ್ತರ ಹೇಳಿ

ಶ್ರೀ ಆರ್. ಅಶೋಕ್: ಮಾನ್ಯ ಅಧ್ಯಕ್ಷರೆ, ಈಗಾಗಲೇ ವಿರೋಧ ಪಕ್ಷದ ನಾಯಕರು ಮಾತನಾಡಿದ್ದರೆ. ತಾವು ಪ್ರಶ್ನೋತ್ತರ ಕಲಾಪವಾದ ಮೇಲೆ ಶಾದಿ ಭಾಗ್ಯದ ಬಗ್ಗೆ ಮಾತನಾಡಲು ಅನುಮತಿಯನ್ನು ಕೊಡಿ.

ಅಧ್ಯಕ್ಷರು: ಆಯಿತು, ಆಯಿತು, ತಾವು ಕುಳಿತುಕೊಳ್ಳಿ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಆದ್ಯಕ್ಷರೆ, ಸನ್ಮಾನ್ಯ ಯಡಿಯೂರಪ್ಪನವರು ಕಳೆದ ಎರಡು ದಿವಸಗಳಿಂದ ಅಹೋರಾತ್ರಿ ಧರಣಿಯನ್ನು ಮಾಡುತ್ತಿದ್ದಾರೆ. ದಯಮಾಡಿ ತಾವು ಕೂಡ ಆ ಪೀಠದಿಂದ ಮನವಿ ಮಾಡಿದ್ದೀರಿ. ಸರ್ಕಾರದ ಪರವಾಗಿಯೂ ಕೂಡ ಅನೇಕ ಮನವಿಗಳನ್ನು ಈಗಾಗಲೇ ಮಾಡಲಾಗಿದೆ ಆದಾಗ್ಯು ಕೂಡ ಅವರ ನಿಲುವನ್ನು ಸಡಿಲಿಸಲಿಲ್ಲ. ಪ್ರಜಾಪ್ರಭುತ್ವದಲ್ಲಿ ನಾನು ಹೇಳತಕ್ಕಂಥದ್ದೇನೆಂದರೆ, ವಿಧಾನ ಸಭೆಯಲ್ಲಿ ಚರ್ಚೆ ಮಾಡಿ ಸರ್ಕಾರದ ಮನವೊಲಿಸತಕ್ಕಂಥ ಕೆಲಸವನ್ನು ಮಾಡುವುದಿದೆ ಆದರೆ ಮಾನ್ಯ

ಯಡಿಯೂರಪ್ಪನವರು ಕಳೆದ ಎರಡು ರಾತ್ರಿಗಳಿಂದ ಧರಣಿಯನ್ನು ಮಾಡುತ್ತಿರತಕ್ಕಂಥದ್ದನ್ನು ನೋಡಿ ಎಲ್ಲರೂ ಆತಂಕ ಪಡುತ್ತಿದ್ದಾರೆ ಅವರಿಗೆ 73ವರ್ಷ ವಯಸ್ಸಾಗಿದೆ ಅವರ ಆರೋಗ್ಯದ ಬಗ್ಗೆ ಏನು ಎನ್ನತಕ್ಕಂಥ ಗಾಬರಿ ನಮಗೂ ಕೂಡ ಇದೆ ದಯಮಾಡಿ ನಾನು ಇವತ್ತು ಕೂಡ ತಮ್ಮಲ್ಲಿ ವಿನಂತಿ ಮಾಡುತ್ತೇನೆ, ಅಂಬರಿಷ್‌ರವರು ಮತ್ತು ಯಡಿಯೂರಪ್ಪನವರಿಬ್ಬರೂ ಒಂದೇ ಜಿಲ್ಲೆಯವರು. ಅಂಬರೀಷ್‌ರವರ ಮನಸ್ಸಿನಲ್ಲೇನಿದೆಯೆಂದರೆ, ಅವರು ಉತ್ತರ ಕೊಡುವಾಗ ಮಾನ್ಯ ಯಡಿಯೂರಪ್ಪನವರು ಅವರ ಪೀಠದಲ್ಲಿರಬೇಕೆಂಬುದು ಅಂಬರೀಷ್‌ರವರ ಆಸೆ ಆ ಕಾರಣಕ್ಕೋಸ್ಕರ ವೈಯಕ್ತಿಕವಾಗಿರ ತಕ್ಕಂಥ ವಿಶ್ವಾಸದ ಮೇಲೆ ಹೋಗಿ ಅವರು ಮಾನ್ಯ ಯಡಿಯೂರಪ್ಪನವರಲ್ಲಿ ಮನವಿಯನ್ನು ಮಾಡಿದ್ದಾರೆ. ಇವತ್ತು ಅಂಬರೀಷ್‌ರವರ ಮನವಿಗಾದರೂ ಅವರು ಅವರ ಸ್ಥಾನದಲ್ಲಿ ಹೊಗಿ ಕುಳಿತರೆ ಚರ್ಚೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳಬಯಸುತ್ತೇನೆ.

(ಗೊಂದಲ)

ಶ್ರೀ ಜಗದೀಶ್‌ಶೆಟ್ಟರ್: ನೀವು ಸಿ ಎಂ ಗೆ ಒತ್ತಾಯ ಮಾಡಿ ಯೋಜನೆಯನ್ನು ಎಲ್ಲರಿಗೂ ಅನ್ವಯಿಸಲಾಗುವುದು ಎಂದು ಘೋಷಣೆ ಮಾಡಿಸಿ

ಶ್ರೀ ಟಿ.ಬಿ ಜಯಚಂದ್ರ: ಜಗದೀಶ್ ಶೆಟ್ಟರ್‌ರವರು ಮುಖ್ಯಮಂತ್ರಿಗಳಾಗಿದ್ದಂಥವರು, ಇವರು ಬಂದು ಯೋಜನೆಯ ಹೆಸರೇ ಇಲ್ಲದಂಥದ್ದರ ಬಗ್ಗೆ ಹೇಳಿಕೊಂಡು ಇಲ್ಲಿ ಧರಣಿ ಮಾಡುವುದು ಎಷ್ಟು ಸರಿ ಎಂಬುವುದನ್ನು ಅರ್ಥ ಮಾಡಿಕೊಳ್ಳಬೇಕು

(ಗೊಂದಲ)

ಅಧ್ಯಕ್ಷರು: ಜಯಚಂದ್ರರವರೆ, ಕಾನೂನು ಸಚಿವರಾಗಿದ್ದೀರಿ, ತಾವು ದಯವಿಟ್ಟು ಕುಳಿತುಕೊಳ್ಳಿ. ವಸತಿ ಸಚಿವರೆ ತಾವು ಉತ್ತರ ಹೇಳಿ

(ಗೊಂದಲ)

ಡಾ: ಎಂ.ಹೆಚ್. ಅಂಬರೀಷ್ (ವಸತಿ ಸಚಿವರು). ಅಣ್ಣೋ, ದಯವಿಟ್ಟು ಕೂತ್ಕೋಳ್ಳಣ್ಣಾ, ನಾನು ಬೆಂಗಳೂರಿನಿಂದ ಬಂದಿದ್ದೇನೆ ಇಲ್ಲಿ ಉತ್ತರ ಹೇಳುವುದಕ್ಕೆ, ಹೆಂಡತಿ ಮಕ್ಕಳನ್ನೆಲ್ಲರನ್ನು ಬಿಟ್ಟುಬಿಟ್ಟು ಇಲ್ಲಿಗೆ ಬಂದಿದ್ದೇನೆ.

ಅಧ್ಯಕ್ಷರು: ಇದು ಡ್ರಾಮಾ ಕಂಪನಿಯಲ್ಲ. ಮಾನ್ಯ ಸದಸ್ಯರ ಪ್ರಶ್ನೆಗೆ ತಾವು ಉತ್ತರ ಹೇಳಿ.

ಶ್ರೀ ಎಸ್.ಟಿ ಸೋಮಶೇಖರ್:- ಮಾನ್ಯ ಅಧ್ಯಕ್ಷರೆ, ಕೆಂಗೇರಿ ಉಪನಗರದಲ್ಲಿ ಶಿರ್ಕೆ ಕಂಪನಿಯವರು ಕಟ್ಟಿರುವ ವಸತಿ ಸಮುಚ್ಚಯದಲ್ಲಿ ಪ್ರತಿ ಮನೆಗೆ ವಿದ್ಯುತ್ ಪೂರೈಕೆ ಸಂಬಂಧಪಟ್ಟಂತೆ ಮೀಟರ್ ಅಳವಡಿಸಲಾಗಿದೆ ಆದರೆ ವಾಟರ್ ಸಪ್ಲೈನಲ್ಲಿ ಪ್ರತಿ ಮನೆಗೆ ಸಪರೇಟ್ ಮೀಟರ್ ಅಳವಡಿಸಿಲ್ಲ ಒಂದು ಲಕ್ಷ ರೂಪಾಯಿಯಂತೆ ಮನೆಯನ್ನು ಅಲಾಟ್‌ಮೆಂಟ್‌ಅನ್ನು ಹೌಸಿಂಗ್ ಬೋರ್ಡ್‌ನವರು ಮಾಡಿದ್ದಾರೆ. ಒಂದು ಲಕ್ಷದ ಮನೆಗೆ 90 ಸಾವಿರ ರೂ.ಗಳನ್ನು ವಾಟರ್ ಬಿಲ್‌ನಲ್ಲಿ ಕಟ್ಟಿಸಿ ಕೊಂಡಿದ್ದಾರೆ. ಇದರಲ್ಲಿ ಹೌಸಿಂಗ್ ಬೋರ್ಡ್‌ನವರು prestige ಆಗಿ ತೆಗೆದು ಕೊಳ್ಳುತ್ತಿದ್ದಾರೆ. ವಾಟರ್ ಬೋರ್ಡ್‌ನವರೂ ಕೂಡ prestige ಆಗಿ ತೆಗೆದು ಕೊಳ್ಳುತ್ತಿದ್ದಾರೆ. ಸನ್ಮಾನ್ಯ ವಸತಿ ಸಚಿವರಲ್ಲಿ ನಾನು ತಮ್ಮ ಮೂಲಕ ಮನವಿ ಮಾಡಿಕೊಳ್ಳುವುದೇನೆಂದರೆ, ವಾಟರ್ ಸಪ್ಲೈ ಬೋರ್ಡ್ ಮತ್ತು ಹೌಸಿಂಗ ಬೋರ್ಡ್ ಅಧಿಕಾರಿಗಳನ್ನು ಒಂದು ಕಡೆ ಕೂರಿಸಿಕೊಂಡು ಐದು ನಿಮಿಷದಲ್ಲಿ ಇದನ್ನು solve ಮಾಡಬೇಕು ತಮ್ಮ ಮುಖಾಂತರ ಅವರಿಗೆ ನಾನು ಮನವಿ ಯನ್ನು ಮಾಡುತ್ತೇನೆ.

ಡಾ॥ ಎಂ.ಹೆಚ್. ಅಂಬರೀಷ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂತೆ ವಾಟರ್ ಸಪ್ಲೈನಿಂದ ನಾವು ನಮ್ಮ ಅಧಿಕಾರಿಗಳ ಸಮೀಕ್ಷೆ ಪ್ರಕಾರ ಇವತ್ತು 90 ಲಕ್ಷ ರೂ. ಗಳಷ್ಟು ನಾವು ಅವರಿಗೆ due ಇದ್ದೇವೆ ಇದಕ್ಕೆ ಬಡ್ಡಿಯ ಮೊತ್ತವನ್ನೆಲ್ಲಾ ಸೇರಿಸಿದರೆ ಸುಮಾರು 1 ರಿಂದ 1.5 ಕೋಟಿ ರೂ.ಗಳ ತನಕ ಬರುತ್ತದೆ. ಇದನ್ನು ನಾವು ಕೊಡುವುದಕ್ಕೆ ತಯಾರಿದ್ದೇವೆ ಆದರೆ ಅವರು ಏನು ಮಾಡಿದ್ದಾರೆಂದರೆ ಈ ವಾಟರ್ ಸಪ್ಲೈನವರು ನಮಗೆ

ಈಗ 35 ಕೋಟಿ ರೂಗಳನ್ನು ಕೊಡಬೇಕೆಂದು ಕಳುಹಿಸಿದ್ದಾರೆ ಅದು ಸರಿಯಲ್ಲವೆಂದು ನಾವು ಪತ್ರದ ಮುಖಾಂತರ negotiate ಮಾಡುತ್ತಿದ್ದೇವೆ 1997 ರಿಂದ 2003 ರತನಕ ಇಲ್ಲಿ ಅಲಾಟ್ ಮಾಡಿರುವುದು. ಆಗ allot ಮಾಡಿರುವುದು. allot ಮಾಡಿರುವವರು ಏನಾದರೂ Water Supply ನವರಿಗೆ ನಾವು ದುಡ್ಡು ಕಟ್ಟಿ ಅವರೂ ಕಟ್ಟಿದ್ದರೆ, ಅದನ್ನು ನಾವು ವಾಪಸ್ಸು ಕೊಡುವುದಕ್ಕೆ ತಯಾರಿದ್ದೇವೆ. ಅದು Negotiation ನಲ್ಲಿದೆ. ನೀವು ಹೇಳಿದ ಹಾಗೆ ಅವರನ್ನು ಕರೆಸಿ ಎಷ್ಟು ಸಾಧ್ಯವೋ ಅಷ್ಟು ನಾವು ಬಿಡಿಸಿಕೊಡುವುದಕ್ಕೆ ಮತ್ತು ಕಟ್ಟುವುದಕ್ಕೆ ತಯಾರಿದ್ದೇವೆ. ಎಲ್ಲಕ್ಕಿಂತ ಹೆಚ್ಚಾಗಿ Water Supply ನವರು ನಮಗೆ 2–3 plot ದುಡ್ಡು ಕೊಡಬೇಕು, 4 50 ಕೋಟಿ ರೂಪಾಯಿ ಅವರದ್ದು balance ಇದೆ ನಮಗೆ ಹಣಕ್ಕೇನೂ ಕೊರತೆ ಇಲ್ಲ. ನಾವು ಅದನ್ನು ಮಾಡಿಕೊಡುತ್ತೇವೆ. ಮಾನ್ಯ ಸದಸ್ಯರು ಕೇಳಿದ ವಿಚಾರದಲ್ಲಿ ಹೇಳುವುದಾದರೆ ಅವರೂ ಹೋಗಿದ್ದರು, ನಾವು ಹೋಗಿದ್ದೆವು. ನಾವು ಆ ವಿಚಾರದ ಬಗ್ಗೆ ಕುಳಿತು ಮಾತನಾಡಬಹುದು ಅವರಿಗೂ ಚೆನ್ನಾಗಿ ಗೊತ್ತಿದೆ ಏಕೆಂದರೆ ಮಾನ್ಯ ಸದಸ್ಯರೂ ಕೂಡ ನಿವೇಶನಗಳನ್ನು ಮಾಡುತ್ತಿದ್ದಾರೆ. ಅವರಿಗೆ Rulesand conditionss ಚೆನ್ನಾಗಿ ಗೊತ್ತಿದ್ದು, ನಾವು ಮತ್ತು ನಮ್ಮ ಅಧಿಕಾರಿಗಳು ತಿಳಿದುಕೊಂಡಿದ್ದು, ಇದರ ಬಗ್ಗೆ ಚಿಂತನೆ ಮಾಡಿ, ಇದಕ್ಕೆ ಸೂಕ್ತವಾದ ಪರಿಹಾರವನ್ನು ಕೊಡಿಸುತ್ತೇವೆಂದು ಭರವಸೆಯನ್ನು ಕೊಡುತ್ತೇನೆ.

ದೇವನಹಳ್ಳಿ ತಾಲ್ಲೂಕಿನ ಗ್ರಾಮೀಣ ರಸ್ತೆಗಳು

582; ಶ್ರೀ ಪಿಳ್ಳ ಮುನಶಾಮಪ್ಪ (ದೇವನಹಳ್ಳಿ)

ಅ) ದೇವನಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಗ್ರಾಮೀಣ ರಸ್ತೆಗಳು ಸಂಪೂರ್ಣ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ರಸ್ತೆಗಳನ್ನು ದುರಸ್ತಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?